**National**
**Kannada**
**04.05.2025 19.35 hrs**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

**1.** ಭಾರತದ ಪ್ರಥಮ ವಿಶ್ವ ಶ್ರವ್ಯ ದೃಶ್ಯ ಮತ್ತು ಮನರಂಜನಾ ಶೃಂಗಸಭೆಗೆ ತೆರೆ : ೩೦೦ ಕೋಟಿ ರೂಪಾಯಿ ಮೌಲ್ಯದ ವ್ಯಾಪಾರ ಒಡಂಬಡಿಕೆ

**2.** ಭಾರತದ ಪ್ರಥಮ ೨ ಜಿನೋಮ್ ಭತ್ತದ ತಳಿಗಳ ಬಿಡುಗಡೆ : ಕಡಿಮೆ ಉತ್ಪಾದನಾ ವೆಚ್ಚ, ಅಧಿಕ ಇಳುವರಿ ನಿರೀಕ್ಷಿತ

**3.** ಇಟಲಿಯ ಮಿಲನ್‌ನಲ್ಲಿ ಇಂದಿನಿಂದ ೪ ದಿನ ಏಷ್ಯಾನ್ ಅಭಿವೃದ್ಧಿ ಬ್ಯಾಂಕ್‌ನ ಬೋರ್ಡ್ ಆಫ್ ಗವರ್ನರ್ಸ್‌ನ ೫೮ನೇ ವಾರ್ಷಿಕ ಸಭೆ; ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಭಾಗಿ

**4.** ಐಪಿಎಲ್ ಟಿ-೨೦ ಕ್ರಿಕೆಟ್ : ರಾಜಸ್ಥಾನ್ ರಾಯಲ್ಸ್ ಎದುರು ಕೊಲ್ಕೊತ್ತಾ ನೈಟ್ ರೈಡರ್ಸ್ ತಂಡಕ್ಕೆ ಒಂದು ರನ್‌ಗಳ ಗೆಲುವು; ಪಂಜಾಬ್ ಕಿಂಗ್ಸ್ ಮತ್ತು ಲಖನೌ ಸೂಪರ್ ಜೈಂಟ್ಸ್ ನಡುವಿನ ಮತ್ತೊಂದು ಪಂದ್ಯ ಪ್ರಗತಿಯಲ್ಲಿ

<><><><>

ಭಾರತದ ಪ್ರಥಮ ವಿಶ್ವ ಶ್ರವ್ಯ ದೃಶ್ಯ ಮನರಂಜನಾ ಶೃಂಗಸಭೆ - ವೇವ್ಸ್ -೨೦೨೫ ಮುಂಬೈನ ಜಿಯೊ ವರ್ಲ್ಡ್ ಕನ್ವೆನ್ಷನ್ ಸೆಂಟರ್‌ನಲ್ಲಿಂದು ಸಂಪನ್ನಗೊಂಡಿತು. ಗುರುವಾರ ಆರಂಭವಾದ ೪ ದಿನಗಳ ಶೃಂಗಸಭೆಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಚಾಲನೆ ನೀಡಿದ್ದು, ೯೦ ದೇಶಗಳ ೧೦ ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಮಾಧ್ಯಮ ಮತ್ತು ಮನರಂಜನಾ ರಂಗದ ತೀಕ್ಷ್ಣ ಬುದ್ಧಿವಂತಿಕೆಯ ಮತ್ತು ಪ್ರಭಾವಿಗಳನ್ನು ಶೃಂಗಸಭೆ ಒಂದುಗೂಡಿಸಿತು. ಮಾಧ್ಯಮ ಮತ್ತು ಮನರಂಜನಾ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ, ಮಾಧ್ಯಮಗಳ ಜಾಗತೀಕರಣ, ವಿಷಯ ನಿರೂಪಣೆಯ ಭವಿಷ್ಯ, ಹೊರಹೊಮ್ಮುತ್ತಿರುವ ತಂತ್ರಜ್ಞಾನಗಳ ಪ್ರಭಾವ ಸೇರಿದಂತೆ ಹಲವು ವಿಷಯಗಳ ಬಗ್ಗೆ ವಿಸ್ತೃತ ಚರ್ಚೆ ನಡೆಯಿತು. ದೇಶಾದ್ಯಂತದ ಚಲನಚಿತ್ರ ನಿರ್ದೇಶಕರು ಮತ್ತು ನಿರ್ಮಾಪಕರಿಂದ ಒಂದು ಸಾವಿರದ ೩೦೦ ಕೋಟಿ ರೂಪಾಯಿಗೂ ಅಧಿಕ ಮೌಲ್ಯದ ವ್ಯಾಪಾರ ಒಪ್ಪಂದಕ್ಕೆ ವೇವ್ಸ್ ಬಜಾರ್ ಸಾಕ್ಷಿಯಾಯಿತು. ೪ ದಿನಗಳ ಶೃಂಗಸಭೆಯಲ್ಲಿ ಭಾರತದ ವೈವಿಧ್ಯತೆಯನ್ನು ಪ್ರದರ್ಶಿಸಿದ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿತು.

<><><><>

ಮುಂಬೈನಲ್ಲಿ ನಡೆಯುತ್ತಿರುವ ೪ ದಿನಗಳ ವಿಶ್ವ ಶ್ರವ್ಯ ದೃಶ್ಯ ಮತ್ತು ಮನರಂಜನಾ ಶೃಂಗಸಭೆ - ವೇವ್ಸ್‌ನ ೪ನೇ ದಿನವಾದ ಇಂದು ಉತ್ಸಾಹಭರಿತ ಬ್ಯಾಂಡ್ ವಾದ್ಯಗಳ ವಾದನದ ಸದ್ದು ಕೇಳಿ ಬಂದಿತು. ಭಾರತದಾದ್ಯಂತದ ಸಾಂಪ್ರದಾಯಿಕ ಜಾನಪದ ಅಂಶಗಳು ಮತ್ತು ಆಧುನಿಕ ಸಂಗೀತದ ಮೇಳೈಸುವಿಕೆಯೊಂದಿಗೆ ಸ್ವತಂತ್ರ ಬ್ಯಾಂಡ್‌ಗಳು ಅಬ್ಬರಿಸಿವೆ. ಅವರ ಮೂಲ ಸಂಯೋಜನೆಗಳು ಕೇವಲ ಸಂಗೀತ ಪ್ರಸ್ತುತಿಯಾಗಿರಲಿಲ್ಲ - ಅವು ಭಾರತದ ರೋಮಾಂಚಕ ಮತ್ತು ಬೆಳೆಯುತ್ತಿರುವ ಇಂಡೀ ಬ್ಯಾಂಡ್ ಮೇಲೆ ಬೆಳಕು ಚೆಲ್ಲುವ ಶಕ್ತಿಶಾಲಿ ಪ್ರದರ್ಶನವಾಗಿತ್ತು. ಇಂದು 'ಪ್ರಭಾವಿಗಳಿಗಾಗಿ ಸಾಮಾಜಿಕ ಮಾಧ್ಯಮ ಜಾಹೀರಾತಿನ ಉತ್ತಮ ಅಭ್ಯಾಸಗಳು' ಎಂಬ ವಿಷಯದ ಕುರಿತ ಕಾರ್ಯಾಗಾರ ನಡೆಯಿತು. ಡಿಜಿಟಲ್ ಆರ್ಥಿಕತೆಯಲ್ಲಿ ಪ್ರಭಾವಿಗಳ ಹೆಚ್ಚುತ್ತಿರುವ ಪಾತ್ರ

ಮತ್ತು ಪ್ರಭಾವಿ ಜಾಹೀರಾತಿನ ವಿಶ್ವಾಸಾರ್ಹತೆಯನ್ನು ಬಲಪಡಿಸಲು ಅಗತ್ಯವಿರುವ ನೈತಿಕ, ಸೃಜನಶೀಲ ಮತ್ತು ಕಾನೂನು ಚೌಕಟ್ಟುಗಳ ಕುರಿತು ಚರ್ಚೆ ಕೇಂದ್ರೀಕೃತವಾಗಿತ್ತು.

<><><>

ವಿಶ್ವ ಶ್ರವ್ಯ ದೃಶ್ಯ ಮತ್ತು ಮನರಂಜನಾ ಶೃಂಗಸಭೆ - ವೇವ್ಸ್‌ನಲ್ಲಿ ಪಾಲ್ಗೊಂಡಿರುವ ಪ್ರತಿಯೊಬ್ಬರು ತಾರಾ ಮೆರಗು ಪಡೆದಿದ್ದಾರೆ ಎಂದು ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ಕಾರ್ಯದರ್ಶಿ ಸಂಜಯ್ ಜಾಜು ಹೇಳಿದ್ದಾರೆ. ಮುಂಬೈನಲ್ಲಿ ವೇವ್ಸ್‌ನ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ಭಾರತದಲ್ಲೇ ಸೃಜಿಸಿ ಸವಾಲಿನಲ್ಲಿ ಸ್ಪರ್ಧಿಸಿದ ಗಾಯಕರು ಭಾರತದ ಸಾಲವನ್ನು ತಮ್ಮ ಸಂಗೀತದ ಮೂಲಕ ಪ್ರಸ್ತುತ ಪಡಿಸಿದರು. ಈ ಸವಾಲಿನ ವಿಜೇತರನ್ನು ಸರ್ಕಾರವು ಅಂತಾರಾಷ್ಟ್ರೀಯ ಪ್ರವಾಸಗಳಿಗೆ ಕರೆದೊಯ್ದು ಹೆಚ್ಚು ಹೆಚ್ಚು ಪ್ರದರ್ಶನಗಳನ್ನು ನೀಡಲು ವ್ಯವಸ್ಥೆ ಮಾಡಲಿದೆ ಎಂದರು. ಎಲೆಮರೆಕಾಯಿಯಂತಿರುವ ಪ್ರತಿಭೆಗಳನ್ನು ಬೆಳಕಿಗೆ ತರಲು ಮತ್ತು ಭಾರತದ ಸಾರವನ್ನು ವಿಶ್ವ ವೇದಿಕೆಯಲ್ಲಿ ಪ್ರದರ್ಶಿಲು ವೇವ್ಸ್ ಪೂರಕವಾಗಿದೆ ಎಂದು ಸಚಿವರು ಹೇಳಿದರು. ಆಕಾಶವಾಣಿಯೊಂದಿಗೆ ಮಾತನಾಡಿದ ಅವರು, ಜನಾಂದೋಲನವಾದ ವೇವ್ಸ್ ಹೂಡಿಕೆ, ವ್ಯಾಪಾರ, ಕಲೆ ಮತ್ತು ಸಂಸ್ಕೃತಿಗೆ ಅನನ್ಯ ವೇದಿಕೆಯಾಗಿದೆ ಎಂದು ಹೇಳಿದರು.

ಧ್ವನಿ : ಸಂಜಯ್ ಜಾಜು (೧೦ ಸೆಕೆಂಡ್‌ಗಳು)

<><><>

ಭಾರತದ ಪ್ರಥಮ ೨ ಜಿನೋಮ್ ಆಧಾರಿತ ಭತ್ತದ ತಳಿಗಳನ್ನು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌವ್ಹಾಣ್ ನವದೆಹಲಿಯಲ್ಲಿಂದು ಬಿಡುಗಡೆ ಮಾಡಿದರು. ಭಾರತೀಯ ಕೃಷಿ ಸಂಶೋಧನಾ ಮಂಡಳಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಈ ದಿನ ಭಾರತಕ್ಕೆ ಐತಿಹಾಸಿಕ ದಿನವಾಗಿದೆ. ಈ ಎರಡು ತಳಿಗಳು ಉತ್ಪಾದನಾ ವೆಚ್ಚವನ್ನು ತಗ್ಗಿಸುವ ಜೊತೆಗೆ ಇಳುವರಿಯನ್ನು ವರ್ಧಿಸಲು ಪೂರಕವಾಗಿವೆ ಎಂದರು. ಈ ತಳಿಗಳನ್ನು ರೂಪಿಸುವಲ್ಲಿ ಶ್ರಮಿಸಿದ ಕೃಷಿ ವಿಜ್ಞಾನಿಗಳನ್ನು ಅಭಿನಂದಿಸಿದ ಸಚಿವರು, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ವಿಕಸಿತ ಭಾರತ ಪರಿಕಲ್ಪನೆಯನ್ನು ಸಾಕಾರಗೊಳಿಸಲು ಇಂತಹ ಸಂಶೋಧನೆಗಳು ಮಹತ್ವದ ಮೈಲಿಗಲ್ಲಾಗಿವೆ ಎಂದು ಹೇಳಿದರು. ಹೆಚ್ಚುತ್ತಿರುವ ಜನಸಂಖ್ಯೆಯ ಪೋಷಕಾಂಶಗಳ ಬೇಡಿಕೆಯನ್ನು ಪೂರೈಸಲು ಉತ್ಪಾದನೆ ಹೆಚ್ಚಿಸುವ ಅಗತ್ಯವಿದೆ. ಈ ಎರಡು ತಳಿಗಳು ರೈತರಿಗೆ ಮಾತ್ರವಲ್ಲ ಜನರಿಗೂ ಅನುಕೂಲಕರ ಎಂದು ಸಚಿವರು ತಿಳಿಸಿದರು.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ವಾಯುಪಡೆ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ಎ.ಪಿ. ಸಿಂಗ್ ಅವರನ್ನು ನವದೆಹಲಿಯಲ್ಲಿ ಇಂದು ಭೇಟಿ ಮಾಡಿದರು. ಪಹಲ್ಗಾಮ್ ದಾಳಿಯ ನಂತರ ಭಾರತ ಮತ್ತು ಪಾಕಿಸ್ತಾನ ನಡುವಣ ಉದ್ವಿಗ್ನ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಮಾತುಕತೆ ನಡೆಸಿದರು.

<><><>

ನವದೆಹಲಿಯಲ್ಲಿ ನಾಳೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಜಪಾನ್ ರಕ್ಷಣಾ ಸಚಿವ ಜೆನ್ ನಕಟಾನಿ ಅವರೊಂದಿಗೆ ದ್ವಿಪಕ್ಷೀಯ ಸಭೆ ನಡೆಸಲಿದ್ದಾರೆ. ಮಾತುಕತೆಯ ವೇಳೆ ಉಭಯ ನಾಯಕರು ಪ್ರಸ್ತುತದ ಪ್ರಾದೇಶಿಕ ಮತ್ತು ಅಂತಾರಾಷ್ಟ್ರೀಯ ಭದ್ರತಾ ಪರಿಸ್ಥಿತಿಗಳ ಬಗ್ಗೆ ಚರ್ಚಿಸಿ ದ್ವಿಪಕ್ಷೀಯ ರಕ್ಷಣಾ ಸಹಕಾರವನ್ನು ಇನ್ನಷ್ಟು ಬಲಗೊಳಿಸುವ ಬಗ್ಗೆ ಮಾತುಕತೆ ನಡೆಸಲಿದ್ದಾರೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಭಾರತ ಮತ್ತು ಜಪಾನ್

ದೀರ್ಘಾವಧಿ ಮೈತ್ರಿ ಹೊಂದಿದ್ದು, ೨೦೧೪ರಲ್ಲಿ ವಿಶೇಷ ತಂತ್ರಗಾರಿಕಾ ಮತ್ತು ಜಾಗತಿಕ ಪಾಲುದಾರಿಕೆ ಬಳಿಕ ಇನ್ನಷ್ಟು ಬಲಗೊಂಡಿದೆ.

<><><><>

ಜಮ್ಮು-ಕಾಶ್ಮೀರದ ರಾಂಬನ್ ಜಿಲ್ಲೆಯ ಜಮ್ಮು-ಶ್ರೀನಗರ ರಾಷ್ಟ್ರೀಯ ಹೆದ್ದಾರಿಯಲ್ಲಿ ಸೇನಾ ವಾಹನವೊಂದು ೭೦೦ ಅಡಿ ಆಳದ ಕಂದಕಕ್ಕೆ ಉರುಳಿ ಬಿದ್ದ ಪರಿಣಾಮ ಮೂವರು ಸೈನಿಕರು ಮೃತಪಟ್ಟಿದ್ದಾರೆ. ಚಾಲಕನ ನಿಯಂತ್ರಣ ತಪ್ಪಿದ್ದರಿಂದ ಜಮ್ಮು, ಶ್ರೀನಗರ, ರಾಷ್ಟ್ರೀಯ ಹೆದ್ದಾರಿಯ ಗಸ್ತು ವಾಹನ ಕಂದಕಕ್ಕೆ ಉರುಳಿಬಿದ್ದಿದ್ದು, ತಕ್ಷಣವೇ ರಕ್ಷಣಾ ಕಾರ್ಯಾಚರಣೆ ಕೈಗೊಳ್ಳಲಾಯಿತು.

<><><><>

ಕೇಂದ್ರ ಹಣಕಾಸು ಮತ್ತು ಕಾರ್ಪೋರೇಟ್ ವ್ಯವಹಾರಗಳ ಸಚಿವೆ ನಿರ್ಮಲಾ ಸೀತಾರಾಮನ್ ಇಟಲಿಯ ಮಿಲನ್‌ನಲ್ಲಿ ಇಂದಿನಿಂದ ೪ ದಿನ ಏಷ್ಯಾನ್ ಅಭಿವೃದ್ಧಿ ಬ್ಯಾಂಕ್‌ನ ಬೋರ್ಡ್ ಆಫ್ ಗವರ್ನರ್ಸ್‌ನ ೫೮ನೇ ವಾರ್ಷಿಕ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಇಟಲಿ, ಜಪಾನ್ ಮತ್ತು ಭೂತಾನ್ ಹಣಕಾಸು ಸಚಿವರೊಂದಿಗೆ ಅವರು ದ್ವಿಪಕ್ಷೀಯ ಸಭೆ ನಡೆಸಲಿದ್ದಾರೆ. ಜೊತೆಗೆ ಅಂತಾರಾಷ್ಟ್ರೀಯ ಸಂಘ ಸಂಸ್ಥೆಗಳು, ಜಾಗತಿಕ ಚಿಂತಕರು, ಉದ್ಯಮ ನಾಯಕರು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳೊಂದಿಗೂ ಮಾತುಕತೆ ನಡೆಸಲಿದ್ದಾರೆ.

<><><><>

ಭಾರತದ ಎಲ್ಲಾ ಜ್ಞಾನವು ಸಂಸ್ಕೃತ ಭಾಷೆಯಲಿದ್ದು ಜನರು ಸಂಸ್ಕೃತ ಭಾಷೆಯನ್ನು ಕಲಿಯಬೇಕು ಮತ್ತು ಅಭ್ಯಾಸ ಮಾಡಬೇಕು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಒತ್ತಿ ಹೇಳಿದ್ದಾರೆ. ನವದೆಹಲಿಯಲ್ಲಿಂದು ಸಂಸ್ಕೃತ ಭಾರತಿ ಆಯೋಜಿಸಿದ್ದ '೧೦೦೮ ಸಂಸ್ಕೃತ ಭಾಷಾ ಶಿಬಿರಗಳ' ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಸಂಸ್ಕೃತ ಭಾಷೆಯು ಪ್ರಪಂಚದ ಸಮಸ್ಯೆಗಳನ್ನು ಪರಿಹರಿಸಲು ಮಾರ್ಗದರ್ಶನ ನೀಡುತ್ತದೆ ಎಂದು ಹೇಳಿದರು. ಸಂಸ್ಕೃತ ಭಾಷೆಯ ಮಹತ್ವವನ್ನು ಒತ್ತಿ ಹೇಳಿದ ಅವರು, ಸಂಸ್ಕೃತವು ಬಹುತೇಕ ಭಾಷೆಗಳ ಮಾತೃಭಾಷೆಯಾಗಿದೆ. ದೇಶದಲ್ಲಿ ಸಂಸ್ಕೃತ ಕಲಿಕೆಯನ್ನು ಉತ್ತೇಜಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆ ಎಂದರು.

<><><><>

ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ನಾಳೆ ಕರ್ನಾಟಕ ಪ್ರವಾಸ ಕೈಗೊಂಡಿದ್ದು, ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿರುವ ಅರಣ್ಯ ಕಾಲೇಜಿಗೆ ಭೇಟಿ ನೀಡಲಿದ್ದಾರೆ.

<><><><>

ಯೋಗದ ಮಹತ್ವವನ್ನು ಸಾರಿದ ಪದ್ಮಶ್ರೀ ಪುರಸ್ಕೃತ ಶಿವಾನಂದ ಬಾಬಾ ನಿನ್ನೆ ರಾತ್ರಿ ವಾರಾಣಸಿಯಲ್ಲಿ ನಿಧನರಾಗಿದ್ದಾರೆ. ಅವರಿಗೆ ೧೨೮ ವರ್ಷ ವಯಸ್ಸಾಗಿತ್ತು. ಅನಾರೋಗ್ಯದಿಂದಾಗಿ ಅವರು, ೪ ದಿನಗಳ ಹಿಂದೆ ಆಸ್ಪತ್ರೆಗೆ ದಾಖಲಾಗಿದ್ದರು. ಪ್ರಧಾನಮಂತ್ರಿ ನರೇಂದ್ರ ಮೋದಿ, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಸೇರಿದಂತೆ ಗಣ್ಯರು ಸಂತಾಪ ಸೂಚಿಸಿದ್ದಾರೆ. ಶಿವಾನಂದ ಬಾಬಾ ಅವರು ಯೋಗದ ಮೂಲಕ ಸಮಾಜಕ್ಕೆ ನೀಡಿದ ಅನುಪಮ ಸೇವೆಗಾಗಿ ೨೦೨೨ ರಲ್ಲಿ ಪದ್ಮಶ್ರೀ ಪುರಸ್ಕಾರಕ್ಕೆ ಭಾಜನರಾಗಿದ್ದರು.

<><><><>

ಕೊಲ್ಕೊತ್ತಾದ ಈಡನ್ ಗಾರ್ಡನ್‌ನಲ್ಲಿ ನಡೆದ ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್ ಎದುರು ಕೊಲ್ಕೊತ್ತಾ ನೈಟ್ ರೈಡರ್ಸ್ ಒಂದು ರನ್ ಗಳ ಗೆಲುವು ಸಾಧಿಸಿದೆ. ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ಆತಿಥೇಯ ಕೊಲ್ಕೊತ್ತಾ ನೈಟ್ ರೈಡರ್ಸ್ ತಂಡ ನಿಗದಿತ ೨೦ ಓವರ್‌ಗಳಲ್ಲಿ ೪ ವಿಕೆಟ್ ನಷ್ಟಕ್ಕೆ ೨೦೬ ರನ್

ಗಳಿಸಿದೆ. ಈ ಗುರಿ ಬೆನ್ನತ್ತಿದ ರಾಜಸ್ಥಾನ್ ರಾಯಲ್ಸ್ ತಂಡ ೨೦ ಓವರ್‌ಗಳಲ್ಲಿ ೮ ವಿಕೆಟ್ ನಷ್ಟಕ್ಕೆ ೨೦೫ ರನ್ ಗಳಿಸಿ ಕೇವಲ ಒಂದು ರನ್ ಗಳಿಂದ ಸೋಲನುಭವಿಸಿತು. ಹಿಮಾಚಲ ಪ್ರದೇಶದ ಧರ್ಮಶಾಲಾದಲ್ಲಿ ನಡೆಯುತ್ತಿರುವ ಮತ್ತೊಂದು ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ಮತ್ತು ಲಖನೌ ಸೂಪರ್ ಜೈಂಟ್ಸ್ ಮುಖಾಮುಖಿಯಾಗಿವೆ. ಲಖನೌ ಸೂಪರ್ ಜೈಂಟ್ಸ್ ತಂಡ ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದೆ. ಪಂದ್ಯ ಪ್ರಗತಿಯಲ್ಲಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>